ಬಂದ ಒಂದು ನೃತ್ಯಪ್ರಕಾರಕ್ಕೆ 'ಶಾಸ್ತ್ರೀಯ ಮನ್ನಣೆ' ಎಂಬ ಪರಿಕಲ್ಪನೆಯನ್ನೇ ನನಗೆ ಒಪ್ಪಬೇಕು ಅನಿಸುವುದಿಲ್ಲ. ಶತಮಾನಗಳಿಂದ ಸರ್ಮಪಣಾ ಮನೋಭಾವದಿಂದ ಸಾವಿರಾರು ಮಂದಿ ಕಲಾವಿದರು, ಲಕ್ಷಾಂತರ ಮಂದಿ ಭಕ್ತರು ಇದನ್ನು ಉಳಿಸಿಬೆಳೆಸಿದ್ದಾರೆ. ಇಲ್ಲಿರುವ ಸೌಂದರ್ಯಪ್ರಜ್ಞೆ, ಅರ್ಪಣಾ ಭಾವ, ಸಾಹಿತ್ಯ ಎಲ್ಲವೂ ಪುರಾತನವಾದದ್ದು. ಅದು ನಿಧಾನವಾಗಿ ತಲೆಮಾರಿನಿಂದ ತಲೆಮಾರಿಗೆ ವಿಕಾಸ ಹೊಂದುತ್ತ, ಫೈನ್‌ಟ್ಯೂನ್ ಆಗುತ್ತಾ ಆಗುತ್ತಾ ಶಾಸ್ತ್ರೀಯತೆಯ ಹೊಳಪನ್ನು ತಾನೇ ಸಿದ್ಧಿಸಿಕೊಂಡಿರುತ್ತದೆ. ಸತ್ರಿಯಾ ನೃತ್ಯಕ್ಕೆ ಅದರದ್ದೇ ಆದ ಸೌಂದರ್ಯವಿದೆ. 15-16ನೇ ಶತಮಾನದಲ್ಲಿ ಶ್ರೀಮಂತ ಶಂಕರದೇವ ಅವರ ಕಾಲದಿಂದ ಇಂದಿನ ದಿನದವರೆಗೂ, ಅಸ್ಸಾಮ್‌ನಲ್ಲಿ ಸತ್ರಿಯಾ ನೃತ್ಯವನ್ನು ಪ್ರಸ್ತುತಪಡಿಸದೇ ಇರುವ ಒಂದೇ ಒಂದು ದಿನವಿಲ್ಲ. ಪ್ರತಿದಿನವೂ ಒಂದಲ್ಲ ಒಂದುಕಡೆ, ಒಂದಲ್ಲ ಒಂದು ಕಾರಣಕ್ಕಾಗಿ ಅದನ್ನು ಪ್ರಸ್ತುತಪಡಿಸಲಾಗುತ್ತದೆ. ಅದು ಜೀವಂತ ಕಲೆಯೆಂಬುದನ್ನು ಪ್ರತ್ಯೇಕವಾಗಿ ವ್ಯಾಖ್ಯಾನಿಸಬೇಕಾಗಿಯೂ ಇಲ್ಲ. ಅಷ್ಟೊಂದು ರಮ್ಯಾದ್ಭುತವಾಗಿ, ಪ್ರಖರವಾಗಿ ಹೊಳೆಯುತ್ತಿದೆ. ಈ ಜೀವಂತಿಕೆಗಿಂತ ದೊಡ್ಡ ಮನ್ನಣೆ ಕಲಾಪ್ರಕಾರಕ್ಕೆ ಬೇಕೆ? ಸತ್ರಿಯಾಕ್ಕೆ ಶಾಸ್ತ್ರೀಯ ಮನ್ನಣೆ ದೊರೆಯಬೇಕು ಎಂದು ದೀರ್ಘಕಾಲದ ಒಂದು ಚಳವಳಿಯೇ ನಡೆದಿದೆ. ಈ ಕ್ಷೇತ್ರದಲ್ಲಿ ಕಲಾವಿದರು, ಗುರುಗಳು, ತಜ್ಞರು, ಸಂಶೋಧಕರು ಆಂದೋಲನದಲ್ಲಿ ಕೈ ಜೋಡಿಸಿದ್ದಾರೆ. ನಾನು ನಂಬಿದ ಕಲೆಯೊಂದಕ್ಕೆ ಸಂಬಂಧಿಸಿ ನಡೆದ ಆಂದೋಲನದಲ್ಲಿ ನಾನೂ ಕೈ ಜೋಡಿಸಿರುವೆ. 1958ರಲ್ಲಿ ಈ ಶಾಸ್ತ್ರೀಯ ಕಲಾಪ್ರಕಾರವೆಂಬ ಸ್ಥಾನಮಾನಕ್ಕಾಗಿ, ನೀಡಬೇಕಾದ ಪ್ರಸ್ತುತಿಗೆ ಸಂಬಂಧಿಸಿದ ಆಹ್ವಾನ ಬಂದಾಗ ನನ್ನ ಗುರುಗಳಾದ ಮಣಿರಾಮ್ ದತ್ತ ಮುಕ್ತಿಯಾರ್, ಡಾ. ಮಹೇಶ್ವರ ನಿಯೋಗ್ ಅವರು ಈ ಆಂದೋಲನದ ನೇತೃತ್ವ ವಹಿಸಿಕೊಂಡರು. ಡಾ. ಮಹೇಶ್ವರ್ ನಿಯೋಗ್ ಅವರು ಸತ್ರಿಯಾ ಕುರಿತ ಬರಹ ಮತ್ತು ಕೃತಿಗಳಿಂದ ಹೊಸ ವಿಚಾರಗಳನ್ನು ಪ್ರಚುರಪಡಿಸುತ್ತಿದ್ದರು. ಅಸ್ಸಾಮ್‌ನ ಪ್ರದರ್ಶನ ಕಲಾಪ್ರಕಾರಗಳ ವಿವಿಧ ಆಯಾಮಗಳ ಬಗ್ಗೆ ಸಂಶೋಧನಾತ್ಮಕ ಲೇಖನಗಳನ್ನು ಬರೆಯುತ್ತಿದ್ದವರು.



ಉಪನ್ಯಾಸಗಳನ್ನು ದೇಶದ ವಿವಿಧೆಡೆಗಳಲ್ಲಿ ಕೊಡುತ್ತಿದ್ದರು.

ಅಸ್ಸಾಮ್‌ನ ಆಗಿನ ರಾಜಧಾನಿ ಶಿಲಾಂಗ್‌ನಲ್ಲಿ ನೃತ್ಯ ಪ್ರದರ್ಶನ ನೀಡುವಂತೆ ಆಹ್ವಾನ ಬಂದಾಗ, ಗುರು ಮಣಿರಾಮ್ ದತ್ತ ಮುಕ್ತಿಯಾರ್ ನೇತೃತ್ವದಲ್ಲಿ ಸತ್ರಿಯಾ ತಂಡವು ಶಿಲಾಂಗ್‌ಗೆ ತೆರಳಿ ನೃತ್ಯ ಪ್ರದರ್ಶನ ನೀಡಿತು. ಅದೇ ಸಂದರ್ಭದಲ್ಲಿ ಓಜಾಪಲ್ಲಿ ನೃತ್ಯ ಪ್ರದರ್ಶನಕ್ಕೂ ವೇದಿಕೆ ಕಲ್ಪಿಸಲಾಗಿತ್ತು. ಹಿರಿಯ ಕಲಾವಿದರಾದ ಲಲಿತ್ ನಾಟ್ ಓಜಾ ಮತ್ತು ಅವರ ತಂಡದವರು ನೃತ್ಯಪ್ರದರ್ಶನ ನೀಡಿದರು. ಎರಡೂ ನೃತ್ಯ ಪ್ರಕಾರಗಳ ದೀರ್ಘ ಪ್ರಸ್ತುತಿಯನ್ನು ಗಮನಿಸಿದ ಸಂಗೀತ ನಾಟಕ ಅಕಾಡೆಮಿಯ ತಂಡವು, ಬಹಳ ಪ್ರಶಂಸೆ ವ್ಯಕ್ತಪಡಿಸಿತು. ಕಲಾವಿದರು, ಪ್ರೇಕ್ಷಕರೆಲ್ಲರೂ